## 24-10-2025

# ಕರ್ನಾಟಕ ರಾಜ್ಯೋತ್ಸವ ಆಚರಣೆ

ವಿದ್ಯಾವರ್ಧಕ ಸಂಘ (ರಿ), ಮೈಸೂರು
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು
ಶೇಷಾದ್ರಿ ಅಯ್ಯರ್ ರಸ್ತೆ, ಮೈಸೂರು – 570 001

ಕನ್ನಡ ರಾಜ್ಯೋತ್ಸವದ ಪ್ರಯುಕ್ತ
ಕನ್ನಡ ವಿಭಾಗ ಹಾಗೂ ಐ.ಕ್ಯೂ.ಎ.ಸಿ ವತಿಯಿಂದ

**ಕರ್ನಾಟಕ ರಾಜ್ಯೋತ್ಸವ ಆಚರಣೆ**



ಪ್ರಧಾನ ಭಾಷಣಕಾರರು
ಶ್ರೀ ಎನ್ ಧನಂಜಯ
ರಂಗಕರ್ಮಿ ,ಉಪನ್ಯಾಸಕರು ಮಹರ್ಷಿ
ಪದವಿಪೂರ್ವ ಕಾಲೇಜು, ಮೈಸೂರು

ಕನ್ನಡ ಬೆಳೆಸಿ
ಕನ್ನಡ ಉಳಿಸಿ
ಸಿರಿಗನ್ನಡಂ ಗೆಲ್ಗೆ
ಸಿರಿಗನ್ನಡಂ ಬಾಳ್ಗೆ



ಅಧ್ಯಕ್ಷತೆ
ಡಾ.ಎಸ್. ಮರೀಗೌಡ
ಪ್ರಾಂಶುಪಾಲರು,

ದಿನಾಂಕ: 07.11.2025 | ಸ್ಥಳ : ಶ್ರೀ.ಡಿ.ಎಂ.ಚಿಕ್ಕಬೋರಯ್ಯ ಸಭಾಂಗಣ

ಯಾವುದೇ ನಾಡಿನ ಶ್ರೀಮಂತಿಕೆ ಅಲ್ಲಿನ ಸ್ಥಳೀಯ ಭಾಷೆಯನ್ನು ಅವಲಂಬಿಸಿರುತ್ತದೆ. ಯಾವ ಭಾಷೆ ಅತ್ಯಂತ ಶ್ರೀಮಂತವಾಗಿರುತ್ತದೆಯೋ ಅಂತಹ ಭಾಷೆಯ ಸಂಸ್ಕೃತಿ ಅತ್ಯಂತ ಉನ್ನತವಾಗಿರುತ್ತದೆ ಎಂದು ಮಹರ್ಷಿ ಕಾಲೇಜಿನ ಉಪನ್ಯಾಸಕ ಹಾಗೂ ಖ್ಯಾತ ರಂಗಕರ್ಮಿ ಧನಂಜಯ ಅಭಿಪ್ರಾಯಪಟ್ಟರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಐಕ್ಯೂಎಸಿ ಘಟಕಗಳು ಜಂಟಿಯಾಗಿ ಏರ್ಪಡಿಸಿದ್ದ 70ನೇ ಕನ್ನಡ ರಾಜ್ಯೋತ್ಸವ ಸಂಭ್ರಮಾಚರಣೆ ಕಾರ್ಯಕ್ರಮದಲ್ಲಿ ಪ್ರಧಾನ ಭಾಷಣಕಾರರಾಗಿ ಆಗಮಿಸಿ ಎನ್.ಧನಂಜಯ ಮಾತನಾಡುತ್ತಿದ್ದರು. ಕನ್ನಡ ಭಾಷೆಯ ಅಸ್ಮಿತೆಯನ್ನು ಉಳಿಸಲು, ಬೆಳೆಸಲು ಅದನ್ನು ಪ್ರತಿನಿತ್ಯ ಎಲ್ಲರೂ ಬಳಸುವಂತಾಗಬೇಕು. ಹಾಗಾದಾಗ ಮಾತ್ರ ಯಾವುದೇ ಭಾಷೆ ಸಮೃದ್ಧವಾಗಿ ಬೆಳೆಯಲು ಸಾಧ್ಯ. ಕರ್ನಾಟಕ ಏಕೀಕರಣದ ಸಮಯದಲ್ಲಿ ಹರಿದು ಹಂಚಿಹೋಗಿದ್ದ ಕನ್ನಡ ಭಾಷೆಯ ಜನರನ್ನು ಒಂದುಗೂಡಿಸುವುದಕ್ಕಾಗಿ, ಹಲವಾರು ಪ್ರಾತಃಸ್ಮರಣೀಯರು ಸಲ್ಲಿಸಿದ ಕೊಡುಗೆಯನ್ನು ನಾವಿಂದು ಸ್ಮರಿಸಿಕೊಳ್ಳಬೇಕಾದುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಇಂದಿನ ಯುವಜನತೆ ಅನ್ಯ ಭಾಷೆಗಳಿಗೆ ಮಾರುಹೋಗದೇ ಕನ್ನಡತನವನ್ನು ಮೈಗೂಡಿಸಿಕೊಂಡು ಕನ್ನಡಿಗರಾಗಿ ಬದುಕಬೇಕಾದುದು ಇಂದಿನ ತುರ್ತು ಅಗತ್ಯವಾಗಿದೆ. 1949ರ ನವಂಬರ್ ಮಾಹೆಯಲ್ಲಿ ಮಹಾರಾಜ ಕಾಲೇಜಿನಲ್ಲಿ ಜರುಗಿದ ಕನ್ನಡ ಕಟ್ಟುವ ಕಾರ್ಯಕ್ರಮದಲ್ಲಿ ಕುವೆಂಪು ಪ್ರಧಾನ ಭಾಷಣ ಮಾಡುತ್ತಾ ಸಚಿವರೊಬ್ಬರು ಕಾರಣ ಕೇಳಿ ನೀಡಿದ್ದ ನೋಟೀಸ್‌ಗೆ ಉತ್ತರವಾಗಿ ಅಖಂಡ ಕರ್ಣಾಟಕ ಕವಿತೆಯ ಮೂಲಕ ದಿಟ್ಟ ಉತ್ತರ ನೀಡಿ ಕನ್ನಡ ಏಕೀಕರಣಕ್ಕೆ ದಕ್ಷಿಣ ಕರ್ನಾಟಕದಿಂದ ಮುನ್ನುಡಿ ಬರೆದಿದ್ದುದನ್ನು ಸ್ಮರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಮರೀಗೌಡ ಮಾತನಾಡುತ್ತಾ ಕನ್ನಡ ಸಾರಸ್ವತ ಲೋಕಕ್ಕೆ ಮಹತ್ತರ ಕೊಡುಗೆ ನೀಡಿದ ಹಲವು ಸಾಹಿತಿಗಳ ಮಾತೃ ಭಾಷೆ ಬೇರೆಯದ್ದೇ ಆಗಿದ್ದರೂ ಸಹ ಕನ್ನಡದಲ್ಲಿ ಸಾಹಿತ್ಯ ರಚಿಸುವ ಮೂಲಕ ತಮ್ಮ ಅಸ್ಮಿತೆಯನ್ನು ಕಂಡುಕೊಂಡು ಪ್ರಸಿದ್ಧರಾದರು. ನಡೆಯುವ ಕಾಲು ಎರಡಾದರು ನಡಿಗೆ ಒಂದು, ನೋಡುವ ಕಣ್ಣು ಎರಡಾದರೂ ನೋಟ ಒಂದು, ಕೇಳುವ ಕಿವಿ ಎರಡಾದರು ಧ್ವನಿ ಒಂದೆ. ಬೇರೇ ಭಾಷೆಗಳನ್ನು ಪ್ರೀತಿಸಿ ಆದರೆ ಕನ್ನಡವನ್ನು ಜೀವಿಸಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳುತ್ತಾ, ಪಾಟೀಲ ಪುಟ್ಟಪ್ಪನವರ ಮಾತುಗಳಾದ "ಕನ್ನಡದ್ದಲ್ಲದ ಒಂದಿಂಚು ನೆಲವೂ ನಮಗೆ ಬೇಡ, ಆದರೇ ಕನ್ನಡದ ಒಂದಿಂಚು ನೆಲವನ್ನು ನಾವು ಬಿಟ್ಟುಕೊಡುವುದಿಲ್ಲ" ಎಂಬ ಮಾತನ್ನು ಇದೇ ವೇಳೆ ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಕಾಜಾಣ ನಾಟಕ ತಂಡದಿಂದ ನೃತ್ಯ ರೂಪಕವನ್ನು ಪ್ರದರ್ಶಿಸಲಾಯಿತು. ಕು.ಧಾತ್ರಿ ಮತ್ತು ಸಂಗಡಿಗರು ಪ್ರಾರ್ಥಿಸಿದ ಕಾರ್ಯಕ್ರಮವನ್ನು ಕನ್ನಡ ವಿಭಾಗ ಮುಖ್ಯಸ್ಥ ಡಾ.ಶ್ರೀನಿವಾಸ.ಟಿ ಸ್ವಾಗತಿಸಿದರು. ಅಧ್ಯಾಪಕ ಸಲಹೆಗಾರರಾದ ಪ್ರೊ.ಲಾವಣ್ಯ.ಎಸ್, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದ ಕಾರ್ಯಕ್ರಮವನ್ನು ಪ್ರೊ.ಪಲ್ಲವಿ.ಡಿ ನಿರೂಪಿಸಿ, ಪ್ರೊ.ಹೇಮಾ.ಕೆ.ಎಂ ವಂದಿಸಿದರು.

- - ಎನ್. ಧನಂಜಯ


ಕರ್ನಾಟಕ ರಾಜ್ಯೋತ್ಸವ ಆಚರಣೆ
ಪ್ರಧಾನ ಭಾಷಣಕಾರರು
ಶ್ರೀ ಎನ್ ಧನಂಜಯ
ರಂಗಕರ್ಮಿ ,ಉಪನ್ಯಾಸಕರು
ಮಹರ್ಷಿ ಪದವಿಪೂರ್ವ ಕಾಲೇಜು,
ಮೈಸೂರು
ಪ್ರೊ.ಲಾವಣ್ಯ.ಎಸ್
ಶ್ರೀ. ಎನ್. ಧನಂಜಯ








































